## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## Spl.C.143/2020

**P.W.- 6**
**C.W.- 21**

ಹೆಸರು : ಲಿಂಗರಾಜಯ್ಯ ಸಿ

ತಂದೆಯ ಹೆಸರು : ಚೌಡಯ್ಯ

ವಯಸ್ಸು : 62 ವರ್ಷ

ಉದ್ಯೋಗ : ನಿವೃತ್ತ ಶಿಕ್ಷಣಾಧಿಕಾರಿ

ವಾಸಸ್ಥಳ : ಮೈಸೂರು

**ದಿನಾಂಕಃ 03.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –**

2. ನಾನು ದಿ.06.06.2016 ರಿಂದ 11.07.2019 ರವರೆಗೆ ಮೈಸೂರು ತಾಲೂಕಿನ ತಾಲೂಕು ಪಂಚಾಯಿತಿಯಲ್ಲಿ ಕಾರ್ಯ ನಿರ್ವಾಹಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

3. ದಿ.07.09.2018 ರಂದು ಎಸಿಬಿ ಕಚೇರಿಯಿಂದ ಒಂದು ಪತ್ರ ಬಂದಿದ್ದು , ಅದರಲ್ಲಿ ಮೈಸೂರು ತಾಲೂಕಿನ ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ ಕಚೇರಿಯ ಕಾರ್ಯದರ್ಶಿಯಾದ ಶ್ರೀ ಮರಪ್ಪ ರವರ ಸೇವಾ ವಿವರದ ಮಾಹಿತಿಯನ್ನು ನೀಡಲು ಕೋರಿದ್ದರು ಮತ್ತು ಕಾರ್ಯ ಹಂಚಿಕೆಯ ವಿವರವನ್ನು ಕೇಳಿದ್ದರು. ಅದರಂತೆ ನಾನು ಅದೇ ದಿನ ಅಂದರೆ ದಿ.07.09.2018 ರಂದು ಈ ಪ್ರಕರಣದ ಆರೋಪಿಯ ಸೇವಾ ವಿವರ ಮತ್ತು ಸೇವಾ ಪುಸ್ತಕದ ದೃಡೀಕೃತ ಪ್ರತಿಗಳನ್ನು ಕಳುಹಿಸಿಕೊಟ್ಟಿರುತ್ತೇನೆ. ಅವುಗಳು ಪುಟ ಸಂಖ್ಯೆ 73 ರಿಂದ 84 ರಲ್ಲಿ ಅಡಕವಾಗಿರುತ್ತವೆ. ಎಸಿಬಿ ಪೊಲೀಸ ನಿರೀಕ್ಷಕರು ಕಳುಹಿಸಿದ

**Spl.C.No.143/20**
**P.W.-6**
**C.W.-21**

ಪತ್ರವನ್ನು ನೋಡುತ್ತಿದ್ದೇನೆ. ಅದನ್ನು ಈಗ ನಿಪಿ.26 ಎಂದು ಗುರುತುಪಡಿಸಿಕೊಳ್ಳಲಾಯಿತು. ಸದರಿ ಪತ್ರಕ್ಕೆ ನಾನು ಉತ್ತರಿಸಿ ಲಗತ್ತಿಸಿದ ದಾಖಲಾತಿಗಳನ್ನು ಈಗ ನೋಡುತ್ತಿದ್ದೇನೆ. ಸದರಿ ಪತ್ರ ಮತ್ತು ದಾಖಲಾತಿಗಳು ಪುಟ ಸಂಖ್ಯೆ 72 ರಿಂದ 84 ರವರೆಗೆ ಇದ್ದು, ಅವುಗಳನ್ನು ಒಟ್ಟಾಗಿ ನಿಪಿ.27 ಎಂದು ಗುರುತುಪಡಿಸಿಕೊಳ್ಳಲಾಯಿತು. ಪ್ರತಿ ದಾಖಾಲತಿಗಳ ಮೇಲೂ ನಾನು ದೃಡೀಕರಿಸಿದ ಬಗ್ಗೆ ಸಹಿ ಮಾಡಿರುತ್ತೇನೆ. ದಿ.07.09.2018 ರ ಪತ್ರದ ಮೇಲೆ ಇರುವ ಸಹಿಯನ್ನು ಸಾಕ್ಷಿ ಗುರುತಿಸಿದ್ದು , ಅದನ್ನು ನಿಪಿ.27(ಎ) ಎಂದು ಗುರುತಪಡಿಸಿಕೊಳ್ಳಲಾಯಿತು.

4. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ. ಆತ ಸಿದ್ದಲಿಂಗಪುರ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

**ಪಾಟೀಸವಾಲುಃ ಆರೋಪಿಗಳ ಪರ ವಕೀಲರು "ಇರುವುದಿಲ್ಲ " ಎಂದಿರುತ್ತಾರೆ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು,
ಮೈಸೂರು.